ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ:- 2025-26ನೇ ಸಾಲಿನ ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆಗೆ ಸಂಬಂಧಿಸಿದ ಆಯವ್ಯವಯ ಘೋಷಣೆ ಕಂಡಿಕೆ:110ರಂತೆ ರಾಜ್ಯದ ಅರ್ಹ 50 ಸರ್ಕಾರಿ ಪ್ರೌಢ ಶಾಲೆಗಳನ್ನು ಪದವಿ ಪೂರ್ವ ಕಾಲೇಜುಗಳನ್ನಾಗಿ ಉನ್ನತೀಕರಿಸುವ ಕುರಿತು.

ಓದಲಾಗಿದೆ:-
1. 2025-26ನೇ ಸಾಲಿನ ಆಯವ್ಯಯ ಘೋಷಿತ ಕಾರ್ಯಕ್ರಮಗಳ ಕಂಡಿಕೆ:110ರ ಘೋಷಣೆ.
2. ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ (ಯೋಜನೆ) ಇವರ ಅನಧಿಕೃತ ಟಿಪ್ಪಣಿ ಸಂಖ್ಯೆ:ಇಪಿ 37 ಎಂಪಿಇ 2025 (1), ದಿನಾಂಕ:27.03.2025
3. ಸರ್ಕಾರದ ಪತ್ರ ಸಂಖ್ಯೆ:ಇಪಿ 96 ಎಸ್‌ಹೆಚ್‌ಹೆಚ್ 2025, ದಿನಾಂಕ:06.05.2025.

******

ಪ್ರಸ್ತಾವನೆ:

ಮೇಲೆ ಓದಲಾದ ಕ್ರಮ ಸಂಖ್ಯೆ (1) ರಲ್ಲಿ 2025-26ನೇ ಸಾಲಿನ ಆಯವ್ಯಯ ಘೋಷಿತ ಕಾರ್ಯಕ್ರಮಗಳ ಕಂಡಿಕೆ:110ರಲ್ಲಿ "ರಾಜ್ಯದ ಅರ್ಹ 50 ಪ್ರೌಢ ಶಾಲೆಗಳನ್ನು ಪದವಿ ಪೂರ್ವ ಕಾಲೇಜುಗಳನ್ನಾಗಿ ಉನ್ನತೀಕರಿಸಲಾಗುವುದು" ಎಂದು ಘೋಷಿಸಲಾಗಿದೆ.

ಮೇಲೆ ಓದಲಾದ ಕ್ರಮ ಸಂಖ್ಯೆ (2) ರಲ್ಲಿ 2025-26ನೇ ಸಾಲಿನಲ್ಲಿ ಆಯವ್ಯಯ ಘೋಷಣೆಯ ಕಾರ್ಯಕ್ರಮಗಳಲ್ಲಿ ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆಗೆ ಸಂಬಂಧಿಸಿದಂತೆ 24 ಕಾರ್ಯಕ್ರಮಗಳನ್ನು ಆದ್ಯತೆ ಮೇರಗೆ ಅನುಷ್ಠಾನಗೊಳಿಸಬೇಕಾಗಿರುವುದರಿಂದ, ಅನುಷ್ಠಾನಗೊಳಿಸಬೇಕಾದ ಶಾಖೆಗಳ ವಿವರಗಳೊಂದಿಗೆ ಸದರಿ ಆಯವ್ಯಯ ಘೋಷಿತ ಕಂಡಿಕೆ/ಕಾರ್ಯಕ್ರಮಗಳ ಅನುಷ್ಠಾನ ಕುರಿತಂತೆ ಸಂಬಂಧಿಸಿದ ಇಲಾಖೆಗಳಿಂದ ಕ್ರಿಯಾ ಯೋಜನೆ ಪಡೆದು, ಆರ್ಥಿಕ ಇಲಾಖೆ ಮತ್ತು ಯೋಜನಾ ಇಲಾಖೆಯ ಅನುಮೋದನೆಯೊಂದಿಗೆ, ಅಗತ್ಯವಿದ್ದಲ್ಲಿ ನಿಯಮಾನುಸಾರ ಸಚಿವ ಸಂಪುಟದ ಅನುಮೋದನೆ ಪಡೆದು ಸೂಕ್ತ ಆಡಳಿತಾತ್ಮಕ ಅನುಮೋದನೆ ನೀಡಲು ಕೂಡಲೇ ಕ್ರಮವಹಿಸುವಂತೆ ತಿಳಿಸಲಾಗಿರುತ್ತದೆ.

ಮೇಲೆ ಓದಲಾದ ಕ್ರಮ ಸಂಖ್ಯೆ (3) ರಲ್ಲಿ ಕ್ರಮ ಸಂಖ್ಯೆ (2)ರ ಅನಧಿಕೃತ ಟಿಪ್ಪಣಿಯಂತೆ 2025-26ನೇ ಸಾಲಿನ ಆಯವ್ಯಯ ಘೋಷಿತ ಕಾರ್ಯಕ್ರಮಗಳ ಕಂಡಿಕೆ:110ರಲ್ಲಿ "ರಾಜ್ಯದ ಅರ್ಹ 100 ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಗಳನ್ನು ಪ್ರೌಢ ಶಾಲೆಗಳನ್ನಾಗಿ ಹಾಗೂ 50 ಪ್ರೌಢ ಶಾಲೆಗಳನ್ನು ಪದವಿ ಪೂರ್ವ ಕಾಲೇಜುಗಳನ್ನಾಗಿ ಉನ್ನತೀಕರಿಸಲಾಗುವುದು." ಈ ಕಾರ್ಯಕ್ರಮವನ್ನು ಅನುಷ್ಠಾನಗೊಳಿಸಲು ಸದರಿ ಕಾರ್ಯಕ್ರಮಕ್ಕೆ ಕ್ರಿಯಾ ಯೋಜನೆಯನ್ನೊಳಗೊಂಡಂತೆ ನಿಗದಿತ ನಮೂನೆಯಲ್ಲಿ ಕನ್ನಡ ಮತ್ತು ಆಂಗ್ಲ ಭಾಷೆಯಲ್ಲಿ ಸಿದ್ಧಪಡಿಸಿ ಸೂಕ್ತ ಸಮರ್ಥನೆಯೊಂದಿಗೆ ಹಾಗೂ ಅಗತ್ಯವಿರುವ ಅನುದಾನದ ವಿವರಗಳೊಂದಿಗೆ ತುರ್ತಾಗಿ ಒಂದು ವಾರದೊಳಗಾಗಿ ಅಗತ್ಯ ದಾಖಲೆಗಳೊಂದಿಗೆ ಸೂಕ್ತ ಪ್ರಸ್ತಾವನೆಯನ್ನು ಸಲ್ಲಿಸುವಂತೆ ನಿರ್ದೇಶಕರು, ಶಾಲಾ ಶಿಕ್ಷಣ ಇಲಾಖೆ(ಪದವಿ ಪೂರ್ವ) ಇವರಿಗೆ ತಿಳಿಸಲಾಗಿರುತ್ತದೆ.

ಅದರಂತೆ, ಇಲಾಖಾ ಮುಖ್ಯಸ್ಥರ ಹಂತದಲ್ಲಿ ಪರಿಶೀಲಿಸಿ, ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆಗೆ ಸಂಬಂಧಿಸಿದಂತೆ 2025-26ನೇ ಸಾಲಿನ ಆಯವ್ಯಯ ಘೋಷಿತ ಕಾರ್ಯಕ್ರಮಗಳ ಕಂಡಿಕೆ:110ರಂತೆ ಅರ್ಹವಿರುವ ಸರ್ಕಾರಿ ಪ್ರೌಢ ಶಾಲೆಗಳನ್ನು ಪದವಿ ಪೂರ್ವ ಕಾಲೇಜುಗಳನ್ನಾಗಿ ಉನ್ನತೀಕರಿಸಲು ಅಗತ್ಯವಿರುವ ಸ್ಥಳ, ಮೂಲಭೂತ ಸೌಲಭ್ಯಗಳು, 10ನೇ ತರಗತಿಯಲ್ಲಿ ಹೆಚ್ಚಿನ

ದಾಖಲಾತಿ ಇರುವ ಬಗ್ಗೆ ಪರಿಶೀಲಿಸಿ ರಾಜ್ಯದ ಜಿಲ್ಲಾ ಉಪ ನಿರ್ದೇಶಕರುಗಳು ತಮ್ಮ ಜಿಲ್ಲೆಯಲ್ಲಿ ಅಗತ್ಯವಿರುವ ಸ್ಥಳಗಳಿಗೆ ಖುದ್ದು ಭೇಟಿ ನೀಡಿ ಅತೀ ಹೆಚ್ಚು ಬೇಡಿಕೆ ಇರುವಂತಹ ಗ್ರಾಮಗಳು, 10ನೇ ತರಗತಿಯಲ್ಲಿ ಅತೀ ಹೆಚ್ಚು ದಾಖಲಾತಿ ಹೊಂದಿರುವಂತಹ ಪ್ರೌಢಶಾಲೆಗಳು, ಮೂಲಭೂತ ಸೌಲಭ್ಯಗಳು ಇರುವ ಹಾಗೂ ಅಗತ್ಯವಿರುವ ಸಂಯೋಜನೆಗಳ ಚೆಕ್ ಲೀಸ್ಟ್ ನೊಂದಿಗೆ ಸಲ್ಲಿಸಿರುವ ಪ್ರಸ್ತಾವನೆಯನ್ನು ನಿರ್ದೇಶಕರು, ಶಾಲಾ ಶಿಕ್ಷಣ ಇಲಾಖೆ (ಪದವಿ ಪೂರ್ವ) ಇವರು ಪರಿಶೀಲಿಸಿ 50 ಸರ್ಕಾರಿ ಪ್ರೌಢಶಾಲೆಗಳನ್ನು ಪದವಿ ಪೂರ್ವ ಕಾಲೇಜುಗಳನ್ನಾಗಿ ಉನ್ನತೀಕರಿಸುವ ಕುರಿತು ಆಡಳಿತ್ಮಾತಕ ಅನುಮೋದನೆ ನೀಡಿ ಸೂಕ್ತ ಆದೇಶ ಹೊರಡಿಸುವಂತೆ ಸರ್ಕಾರಕ್ಕೆ ಪ್ರಸ್ತಾವನೆಯನ್ನು ಸಲ್ಲಿಸಿರುತ್ತಾರೆ.

ನಿರ್ದೇಶಕರು, ಶಾಲಾ ಶಿಕ್ಷಣ ಇಲಾಖೆ (ಪದವಿ ಪೂರ್ವ) ಇವರ ಪ್ರಸ್ತಾವನೆಯನ್ನು ಪರಿಶೀಲಿಸಲಾಗಿದೆ. 2025-26ನೇ ಸಾಲಿನ ಆಯವ್ಯಯ ಕಂಡಿಕೆ-110ರಲ್ಲಿ ಘೋಷಣೆಯಂತೆ ರಾಜ್ಯದ 50 ಸರ್ಕಾರಿ ಪ್ರೌಢಶಾಲೆಗಳನ್ನು ಪದವಿ ಪೂರ್ವ ಕಾಲೇಜುಗಳನ್ನಾಗಿ ಉನ್ನತೀಕರಿಸಲು ಸರ್ಕಾರವು ತೀರ್ಮಾನಿಸಿದೆ.

ಸರ್ಕಾರದ ಆದೇಶ ಸಂಖ್ಯೆ: ಇಪಿ 96 ಎಸ್ ಹೆಚ್ ಹೆಚ್ 2025, ಬೆಂಗಳೂರು, ದಿನಾಂಕ:13-03-2026.

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, 2025-26ನೇ ಸಾಲಿನ ಆಯವ್ಯಯ ಕಂಡಿಕೆ-110ರಲ್ಲಿ ಘೋಷಿಸಲಾಗಿರುವಂತೆ ಅನುಬಂಧದಲ್ಲಿ ನಮೂದಿಸಿರುವ ರಾಜ್ಯದ ಅರ್ಹ 50 ಸರ್ಕಾರಿ ಪ್ರೌಢಶಾಲೆಗಳನ್ನು ಪದವಿ ಪೂರ್ವ ಕಾಲೇಜುಗಳನ್ನಾಗಿ ಉನ್ನತೀಕರಿಸಲು ಚಾಲ್ತಿಯಲ್ಲಿರುವ ಮಾನದಂಡಗಳನ್ನು ಈ ಕೆಳಕಂಡ ಷರತ್ತುಗಳಿಗೊಳಪಟ್ಟು ಸರ್ಕಾರದ ಆಡಳಿತ್ಮಾಕ ಅನುಮೋದನೆ ನೀಡಿ ಆದೇಶಿಸಿದೆ.

ಷರತ್ತುಗಳು

1. 15 ಕಿ.ಮೀ. ವ್ಯಾಪ್ತಿಯೊಳಗೆ ಇತರ ಯಾವುದೇ ಸರ್ಕಾರಿ/ಅನುದಾನಿತ ಪದವಿ ಪೂರ್ವ ಕಾಲೇಜುಗಳಿಲ್ಲದಿದ್ದಲ್ಲಿ ಹಾಗೂ 10ನೇ ತರಗತಿಯಲ್ಲಿ ಕನಿಷ್ಠ ವಿದ್ಯಾರ್ಥಿಗಳ ಸಂಖ್ಯೆ 40ಕ್ಕಿಂತ ಕಡಿಮೆ ಇಲ್ಲದ ಪ್ರೌಢಶಾಲೆಗಳನ್ನು ಮಾತ್ರ ಪ್ರಸಕ್ತ ಶೈಕ್ಷಣಿಕ ಸಾಲಿಗೆ ಯಾವುದಾದರೂ ಒಂದು ಪೂರ್ವ ಕೋರ್ಸ್ ಸಂಯೋಜನೆಯೊಂದಿಗೆ (Course Combination) ಕಾಲೇಜುಗಳನ್ನಾಗಿ ಉನ್ನತೀಕರಿಸಿ ಪ್ರಾರಂಭಿಸುವುದು.
2. ಒಂದು ವೇಳೆ ಉನ್ನತೀಕರಿಸಲು ಪ್ರಸ್ತಾಪಿಸುವ ಪ್ರೌಢಶಾಲೆಯ 10ನೇ ತರಗತಿಯಲ್ಲಿ 100 ಅಥವಾ ಅದಕ್ಕಿಂತ ಹೆಚ್ಚು ವಿದ್ಯಾರ್ಥಿಗಳಿದ್ದಲ್ಲಿ, 15 ಕಿ.ಮೀ. ವ್ಯಾಪ್ತಿಯಲ್ಲಿ ಇತರ ಯಾವುದೇ ಪದವಿ ಪೂರ್ವ ಕಾಲೇಜುಗಳು ಇರಬಾರದೆಂಬ ಮಾನದಂಡವನ್ನು ಕೈಬಿಡುವುದು;
3. ಕೆ.ಕೆ.ಡಿ.ಆರ್.ಬಿ/ಸಿಎಸ್ಆರ್ ಏಜೆನ್ಸಿಗಳಿಂದ ಮುಂದಿನ ಮೂರು ವರ್ಷಗಳ ಕಾಲ ವೇತನ ಮತ್ತು ಮೂಲಸೌಕರ್ಯಕ್ಕಾಗಿ ಅನುದಾನ ಒದಗಿಸಲಾಗುವ ಸರ್ಕಾರಿ ಪ್ರೌಢಶಾಲೆಗಳನ್ನು ಪದವಿ ಪೂರ್ವ ಕಾಲೇಜುಗಳನ್ನಾಗಿ ಉನ್ನತೀಕರಿಸುವ ಪ್ರಸ್ತಾವನೆಗಳಿಗೆ ಮೇಲಿನ ಎರಡು ಷರತ್ತುಗಳಿಂದ ವಿನಾಯಿತಿ ನೀಡಬಹುದು.

3—

4. ಸಿಎಸ್‌ಆರ್ ವತಿಯಿಂದ 04 ಸರ್ಕಾರಿ ಪ್ರೌಢಶಾಲೆಗಳನ್ನು ಪದವಿ ಪೂರ್ವ ಕಾಲೇಜುಗಳನ್ನಾಗಿ ಉನ್ನತೀಕರಿಸಲು ಮೂಲಭೂತ ಸೌಲಭ್ಯಗಳ ನಿರ್ಮಾಣ ಮತ್ತು ಆವರ್ತಕ ವೆಚ್ಚಗಳಿಗೆ ಅನುದಾನವನ್ನು ಒದಗಿಸುವುದು.
5. ಕೆ.ಕೆ.ಆರ್.ಡಿ.ಬಿ.ಯ ವತಿಯಿಂದ 14 ಸರ್ಕಾರಿ ಪ್ರೌಢಶಾಲೆಗಳನ್ನು ಪದವಿ ಪೂರ್ವ ಕಾಲೇಜುಗಳನ್ನಾಗಿ ಉನ್ನತೀಕರಿಸಲು ಅನುದಾನ ಒದಗಿಸುವ ಕಾಲಾವಧಿ ಮುಗಿದ ನಂತರ ಈ ಕಾಲೇಜುಗಳನ್ನು ಮುಂದುವರೆಸುವ ಅಗತ್ಯವಿರುವ ಬಗ್ಗೆ ಇಲಾಖೆಯು ಪರಿಶೀಲಿಸಿ, ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸತಕ್ಕದ್ದು.
6. ಹುದ್ದೆಗಳನ್ನು ನಿಯೋಜನೆ/ಮರುಹಂಚಿಕೆ (redeployment) ಮಾಡಲು ಕಾರ್ಯ ಸಾಧ್ಯವಾಗದ ಕಾರಣ ಹೊಸ ಹುದ್ದೆಗಳನ್ನು ಸೃಜಿಸಬೇಕಾದಲ್ಲಿ ಅಂತಹ ಪ್ರಸ್ತಾವನೆಗಳನ್ನು ಪ್ರತ್ಯೇಕವಾಗಿ ಸಲ್ಲಿಸುವುದು.

ಈ ಆದೇಶವನ್ನು ಆರ್ಥಿಕ ಇಲಾಖೆ ಟಿಪ್ಪಣಿ ಸಂಖ್ಯೆ: ಆಇ 430 ವೆಚ್ಚ-8/2025, ದಿನಾಂಕ:05.02.2026ರಂದು ನೀಡಿರುವ ಸಹಮತಿ ಮೇರೆಗೆ ಹೊರಡಿಸಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ,
13/3/26
(ಪದ್ಮಿನಿ ಎಸ್.ಎನ್.)
ಸರ್ಕಾರದ ಅಧೀನ ಕಾರ್ಯದರ್ಶಿ,
ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ,
(ಪದವಿ ಪೂರ್ವ ಶಿಕ್ಷಣ)

ಇವರಿಗೆ:-
ಸಂಕಲನಕಾರರು, ಕರ್ನಾಟಕ ರಾಜ್ಯ ಪತ್ರ, ಬೆಂಗಳೂರು. ಮುಂದಿನ ಸಂಚಿಕೆಯಲ್ಲಿ ಪ್ರಕಟಿಸಲು ಮತ್ತು 50 ಪ್ರತಿಗಳನ್ನು ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ (ಪದವಿ ಪೂರ್ವ ಶಿಕ್ಷಣ)ಗೆ ಒದಗಿಸುವಂತೆ ಕೋರಲಾಗಿದೆ.

1. ಮಹಾಲೇಖಪಾಲರು, (ಆಡಿಟ್ 1 & 2) ಕರ್ನಾಟಕ, ಬೆಂಗಳೂರು.
2. ನಿರ್ದೇಶಕರು, ಶಾಲಾ ಶಿಕ್ಷಣ ಇಲಾಖೆ(ಪದವಿ ಪೂರ್ವ), ಮಲ್ಲೇಶ್ವರಂ 18ನೇ ಕ್ರಾಸ್, ಬೆಂಗಳೂರು.
3. ರಾಜ್ಯ ಯೋಜನಾ ನಿರ್ದೇಶಕರು, ಸಮಗ್ರ ಶಿಕ್ಷಣ ಕರ್ನಾಟಕ, ಹೊಸ ಸಾರ್ವಜನಿಕರ ಕಛೇರಿ, ಕೆ.ಆರ್.ಸರ್ಕಲ್, ನೃಪತುಂಗ ರಸ್ತೆ, ಬೆಂಗಳೂರು.
4. ಶಾಲಾ ಶಿಕ್ಷಣ ಇಲಾಖೆ (ಪದವಿ ಪೂರ್ವ)ಯ ಎಲ್ಲಾ ಜಿಲ್ಲೆಗಳ ಉಪ ನಿರ್ದೇಶಕರು(ನಿರ್ದೇಶಕರು, ಶಾಲಾ ಶಿಕ್ಷಣ ಇಲಾಖೆ(ಪದವಿ ಪೂರ್ವ), ಬೆಂಗಳೂರು ಇವರ ಮುಖಾಂತರ).
5. ಸಂಬಂಧಪಟ್ಟ ಅಧಿಕಾರಿಗಳು-(ನಿರ್ದೇಶಕರು, ಶಾಲಾ ಶಿಕ್ಷಣ ಇಲಾಖೆ(ಪದವಿ ಪೂರ್ವ), ಬೆಂಗಳೂರು ಇವರ ಮುಖಾಂತರ).
6. ಇ-ಆಡಳಿತ, ಮಾಹಿತಿ ಕೇಂದ್ರ, ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ (ವೆಬ್‌ಸೈಟ್‌ನಲ್ಲಿ ಪ್ರಕಟಿಸಲು).
7. ಶಾಖಾ ರಕ್ಷಾ ಕಡತ// ಹೆಚ್ಚುವರಿ ಪ್ರತಿಗಳು.

4—

ಪ್ರತಿ:-

1. ಮಾನ್ಯ ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವರ ಆಪ್ತ ಕಾರ್ಯದರ್ಶಿಗಳು, ವಿಧಾನಸೌಧ, ಬೆಂಗಳೂರು.
2. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಆರ್ಥಿಕ ಇಲಾಖೆ, ಇವರ ಆಪ್ತ ಕಾರ್ಯದರ್ಶಿ, ವಿಧಾನಸೌಧ, ಬೆಂಗಳೂರು.
3. ಸರ್ಕಾರದ ಪ್ರಧಾನ ಕಾರ್ಯದರ್ಶಿ ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ ರವರ ಆಪ್ತ ಕಾರ್ಯದರ್ಶಿ, ಬಹುಮಹಡಿಗಳ ಕಟ್ಟಡ, ಬೆಂಗಳೂರು.
4. ಸರ್ಕಾರದ ವಿಶೇಷ ಕಾರ್ಯದರ್ಶಿ (ಸೇವೆಗಳು), ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ, ಬಹುಮಹಡಿಗಳ ಕಟ್ಟಡ, ಬೆಂಗಳೂರು.
5. ಸರ್ಕಾರದ ಅಧೀನ ಕಾರ್ಯದರ್ಶಿ, ಆರ್ಥಿಕ ಇಲಾಖೆ (ವೆಚ್ಚ 7 & 8) ವಿಧಾನ ಸೌಧ, ಬೆಂಗಳೂರು.

*****

ಸರ್ಕಾರದ ಆದೇಶ ಸಂಖ್ಯೆ:ಇಪಿ 96 ಎಸ್‌ಹೆಚ್‌ಹೆಚ್ 2025ರ, ದಿನಾಂಕ: 13/03/2026ರ ಅನುಬಂಧ

ಪದವಿ ಪೂರ್ವ ಕಾಲೇಜುಗಳನ್ನಾಗಿ ಉನ್ನತೀಕರಿಸಲಾದ 50 ಸರ್ಕಾರಿ ಪ್ರೌಢಶಾಲೆಗಳ ಪಟ್ಟಿ				
ಕ್ರ. ಸಂ	ಜಿಲ್ಲೆ	ತಾಲ್ಲೂಕು	UDISE NUMBER	ಉನ್ನತೀಕರಿಸಲಾದ ಪ್ರೌಢಶಾಲೆಯ ಹೆಸರು
1.	ಬೆಂಗಳೂರು ಉತ್ತರ	ಬೆಂಗಳೂರು ಉತ್ತರ	29280208619	ಸರ್ಕಾರಿ ಪ್ರೌಢಶಾಲೆ ಹೆಗ್ಗನಹಳ್ಳಿ, ಬೆಂಗಳೂರು ಉತ್ತರ ತಾಲ್ಲೂಕು, ಬೆಂಗಳೂರು ಉತ್ತರ ಜಿಲ್ಲೆ.
2.	ಬೆಂಗಳೂರು ದಕ್ಷಿಣ	ಆನೇಕಲ್ ತಾಲ್ಲೂಕು	29200433714	ಸರ್ಕಾರಿ ಪ್ರೌಢಶಾಲೆ ಹೆಬ್ಬಗೋಡಿ, ಆನೇಕಲ್ ತಾಲ್ಲೂಕು. ಬೆಂಗಳೂರು ದಕ್ಷಿಣ ಜಿಲ್ಲೆ.
3.	ಬೆಂಗಳೂರು ಗ್ರಾಮಾಂತರ	ದೊಡ್ಡಬಳ್ಳಾಪುರ	29210204402	ಸರ್ಕಾರಿ ಪ್ರೌಢಶಾಲೆ, ಚನ್ನವೀರನಹಳ್ಳಿ, ದೊಡ್ಡಬಳ್ಳಾಪುರ ತಾಲ್ಲೂಕು ಬೆಂಗಳೂರು ಗ್ರಾಮಾಂತರ ಜಿಲ್ಲೆ.
4.	ಬೆಂಗಳೂರು ಗ್ರಾಮಾಂತರ	ದೇವನಹಳ್ಳಿ	29210304206	ಸರ್ಕಾರಿ ಪ್ರೌಢಶಾಲೆ, ಜಾಲಿಗೆ, ದೇವನಹಳ್ಳಿ ತಾಲ್ಲೂಕು. ಬೆಂಗಳೂರು ಗ್ರಾಮಾಂತರ ಜಿಲ್ಲೆ.
5.	ಬೆಳಗಾವಿ	ಸವದತ್ತಿ	29011207304	ಸರ್ಕಾರಿ ಪ್ರೌಢಶಾಲೆ ಮದ್ದೂರು, ಸವದತ್ತಿ ತಾಲ್ಲೂಕು, ಬೆಳಗಾವಿ ಜಿಲ್ಲೆ.
6.	ಕೋಲಾರ	ಶ್ರೀನಿವಾಸಪುರ	29191219108	ಸರ್ಕಾರಿ ಪ್ರೌಢಶಾಲೆ, ಲಕ್ಷ್ಮೀಪುರ, ಶ್ರೀನಿವಾಸಪುರ ತಾಲ್ಲೂಕು, ಕೋಲಾರ ಜಿಲ್ಲೆ.
7.	ವಿಜಯಪುರ	ಮುದ್ದೇಬಿಹಾಳ	29031014115	ಸರ್ಕಾರಿ ಪ್ರೌಢಶಾಲೆ, ತಂಗಡಗಿ, ಮುದ್ದೇಬಿಹಾಳ ತಾಲ್ಲೂಕು, ವಿಜಯಪುರ ಜಿಲ್ಲೆ.
8.	ಚಿಕ್ಕೋಡಿ	ಚಿಕ್ಕೋಡಿ.	29300510605	ಸರ್ಕಾರಿ ಪ್ರೌಢಶಾಲೆ, ನಾಗರಮುನ್ನೋಳಿ, ಚಿಕ್ಕೋಡಿ ತಾಲ್ಲೂಕು. ಚಿಕ್ಕೋಡಿ ಜಿಲ್ಲೆ.
9.	ಚಿತ್ರದುರ್ಗ	ಹೊಳಲ್ಕೆರೆ.	29130120801	ಸರ್ಕಾರಿ ಪ್ರೌಢಶಾಲೆ, ಭರಮಸಾಗರ, ಹೊಳಲ್ಕೆರೆ ತಾಲ್ಲೂಕು. ಚಿತ್ರದುರ್ಗ ಜಿಲ್ಲೆ.
10.	ಉತ್ತರ ಕನ್ನಡ	ಭಂಟ್ವಾಳ	29100900309	ಸರ್ಕಾರಿ ಪ್ರೌಢಶಾಲೆ, ತೆರ್ನಮಕ್ಕಿ, ಭಂಟ್ವಾಳ ತಾಲ್ಲೂಕು, ಉತ್ತರ ಕನ್ನಡ ಜಿಲ್ಲೆ.
11.	ದಕ್ಷಿಣ ಕನ್ನಡ	ಮಂಗಳೂರು	29240105303	ಸರ್ಕಾರಿ ಪ್ರೌಢಶಾಲೆ ಕಲ್ಲರಕೋಡಿ, ಮಂಗಳೂರು, ದಕ್ಷಿಣ ಕನ್ನಡ ಜಿಲ್ಲೆ.
12.	ದಕ್ಷಿಣ ಕನ್ನಡ	ಬಂಟ್ವಾಳ	29240108107	ಸರ್ಕಾರಿ ಪ್ರೌಢಶಾಲೆ (ಆರ್.ಎಂ.ಎಸ್.ಎ), ವಿಟ್ಲ, ಬಂಟ್ವಾಳ ತಾಲ್ಲೂಕು, ದಕ್ಷಿಣ ಕನ್ನಡ ಜಿಲ್ಲೆ.
13.	ಗದಗ	ಗದಗ	29080409004	ಸರ್ಕಾರಿ ಪ್ರೌಢಶಾಲೆ, ಗೋಗೇರಿ, ಗದಗ ಜಿಲ್ಲೆ.

14.	ಕೋಲಾರ	ಕೋಲಾರ.	29190720906	ಸರ್ಕಾರಿ ಪ್ರೌಢಶಾಲೆ, ಕ್ಯಾಲನೂರು, ಕೋಲಾರ ತಾಲ್ಲೂಕು. ಕೋಲಾರ ಜಿಲ್ಲೆ.
15.	ಮೈಸೂರು	ನಂಜನಗೂಡು	29260914403	ಸರ್ಕಾರಿ ಪ್ರೌಢಶಾಲೆ, ಕಸುವಿನಹಳ್ಳಿ, ನಂಜನಗೂಡು ತಾಲ್ಲೂಕು. ಮೈಸೂರು ಜಿಲ್ಲೆ.
16.	ಮೈಸೂರು	ಮೈಸೂರು	29260817002	ಸರ್ಕಾರಿ ಪ್ರೌಢಶಾಲೆ, ಸಾಲುಂಡಿ, ಮೈಸೂರು ಜಿಲ್ಲೆ.
17.	ವಿಜಯಪುರ	ಕೊಲ್ಹಾರ	29030322703	ಸರ್ಕಾರಿ ಪ್ರೌಢಶಾಲೆ, ಮಲಘಾಣ, ಕೊಲ್ಹಾರ ತಾಲ್ಲೂಕು. ವಿಜಯಪುರ ಜಿಲ್ಲೆ.
18.	ಬಾಗಲಕೋಟೆ	ಬದಾಮಿ	29020104002	ಸರ್ಕಾರಿ ಪ್ರೌಢಶಾಲೆ, ಹಾಲಿಗೇರಿ, ಬದಾಮಿ ತಾಲ್ಲೂಕು. ಬಾಗಲಕೋಟೆ ಜಿಲ್ಲೆ.
19.	ಬಾಗಲಕೋಟೆ	ಇಲಕಲ್ಲ	29020709909	ಸರ್ಕಾರಿ ಪ್ರೌಢಶಾಲೆ, ಕಂದಗಲ್ಲ, ಇಲಕಲ್ಲ ತಾಲ್ಲೂಕು. ಬಾಗಲಕೋಟೆ ಜಿಲ್ಲೆ.
20.	ಚಿಕ್ಕಬಳ್ಳಾಪುರ	ಬಾಗೇಪಲ್ಲಿ	29290119901	ಸರ್ಕಾರಿ ಪ್ರೌಢಶಾಲೆ, ತಿಮ್ಮಂಪಲ್ಲಿ, ಬಾಗೇಪಲ್ಲಿ ತಾಲ್ಲೂಕು, ಚಿಕ್ಕಬಳ್ಳಾಪುರ ಜಿಲ್ಲೆ
21.	ಚಿಕ್ಕಬಳ್ಳಾಪುರ	ಗುಡಿಬಂಡೆ	29290608705	ಸರ್ಕಾರಿ ಪ್ರೌಢಶಾಲೆ, ಸೋಮೇನಹಳ್ಳಿ, ಗುಡಿಬಂಡೆ ತಾಲ್ಲೂಕು, ಚಿಕ್ಕಬಳ್ಳಾಪುರ ಜಿಲ್ಲೆ
22.	ಶಿವಮೊಗ್ಗ	ಶಿವಮೊಗ್ಗ	29150527603	ಸರ್ಕಾರಿ ಪ್ರೌಢಶಾಲೆ, ಪಿಳ್ಳಂಗಿರಿ ಶಿವಮೊಗ್ಗ ತಾಲ್ಲೂಕು. ಶಿವಮೊಗ್ಗ ಜಿಲ್ಲೆ.
23.	ಶಿವಮೊಗ್ಗ	ಸೊರಬ	29150605811	ಸರ್ಕಾರಿ ಬಾಲಿಕಾ ಪ್ರೌಢಶಾಲೆ, ಆನವಟ್ಟಿ, ಸೊರಬ ತಾಲ್ಲೂಕು, ಶಿವಮೊಗ್ಗ ಜಿಲ್ಲೆ
24.	ತುಮಕೂರು	ಮಧುಗಿರಿ	29310416905	ಸರ್ಕಾರಿ ಪ್ರೌಢಶಾಲೆ, ಬಡವನಹಳ್ಳಿ, ಮಧುಗಿರಿ ತಾಲ್ಲೂಕು, ತುಮಕೂರು ಜಿಲ್ಲೆ.
25.	ಚಿಕ್ಕಮಗಳೂರು	ಕೊಪ್ಪ	29170204405	ಸರ್ಕಾರಿ ಪ್ರೌಢಶಾಲೆ, ಬಾಳಗಡಿ, ಕೊಪ್ಪ ತಾಲ್ಲೂಕು. ಚಿಕ್ಕಮಗಳೂರು ಜಿಲ್ಲೆ.
26.	ವಿಜಯಪುರ	ಬಾಗೇವಾಡಿ	29030307001	ಸರ್ಕಾರಿ ಪ್ರೌಢಶಾಲೆ, ಕುಬಕಡ್ಡಿ, ಬಸವನ ಬಾಗೇವಾಡಿ ತಾಲ್ಲೂಕು, ವಿಜಯಪುರ ಜಿಲ್ಲೆ
27.	ವಿಜಯಪುರ	ದೇವರಹಿಪ್ಪರಗಿ	2903121104	ಸರ್ಕಾರಿ ಪ್ರೌಢಶಾಲೆ, ಅಸ್ಕಿ ದೇವರಹಿಪ್ಪರಗಿ ತಾಲ್ಲೂಕು, ವಿಜಯಪುರ ಜಿಲ್ಲೆ
28.	ಚಿಕ್ಕಬಳ್ಳಾಪುರ	ಚಿಂತಾಮಣಿ	29290426403	ಬಿ.ಎನ್.ಎ.ಜಿ.ಹೆಚ್.ಎಸ್. ಸರ್ಕಾರಿ ಪ್ರೌಢಶಾಲೆ, ಮುರುಗಮಲೆ, ಚಿಂತಾಮಣಿ ತಾಲ್ಲೂಕು, ಚಿಕ್ಕಬಳ್ಳಾಪುರ ಜಿಲ್ಲೆ

29.	ವಿಜಯಪುರ	ಸಿಂದಗಿ	29031209006	ಸರ್ಕಾರಿ ಪ್ರೌಢಶಾಲೆ, ಕೊರಹಳ್ಳಿ, ಸಿಂದಗಿ ತಾಲ್ಲೂಕು, ವಿಜಯಪುರ ಜಿಲ್ಲೆ.
30.	ಬಾಲಗಲಕೋಟೆ	ಮುಧೋಳ	29021107015	ಸರ್ಕಾರಿ ಪ್ರೌಢಶಾಲೆ, ಶಿರೋಳ, ಮುಧೋಳ ತಾಲ್ಲೂಕು, ಬಾಲಗಲಕೋಟೆ ಜಿಲ್ಲೆ.
31.	ಧಾರವಾಡ	ಹುಬ್ಬಳ್ಳಿ	29090606705	ಶ್ರೀ ಆರ್.ಕೆ.ಪಾಟೀಲ ಕರ್ನಾಟಕ ಪಬ್ಲಿಕ್ ಸ್ಕೂಲ್, ಬಿಡನಾಳ, ಹುಬ್ಬಳ್ಳಿ, ಧಾರವಾಡ ಜಿಲ್ಲೆ.
32.	ಬಾಗಲಕೋಟೆ	ಮುಧೋಳ	29021107303	ಸರ್ಕಾರಿ ಪ್ರೌಢಶಾಲೆ, ಉತ್ತೂರು, ಮುಧೋಳ ತಾಲ್ಲೂಕು, ಬಾಗಲಕೋಟೆ ಜಿಲ್ಲೆ.
ಕೆ.ಕೆ.ಆರ್.ಡಿ.ಬಿ ಅನುದಾನದಿಂದ ಉನ್ನತೀಕರಿಸಲಾದ ಸರ್ಕಾರಿ ಪ್ರೌಢಶಾಲೆಗಳ ಪಟ್ಟಿ				
33.	ಕಲಬುರಗಿ	ಸೇಡಂ	29040919108	ಸರ್ಕಾರಿ ಪ್ರೌಢಶಾಲೆ, ಸೇಡಂ, ಸೇಡಂ ತಾಲ್ಲೂಕು. ಕಲಬುರಗಿ ಜಿಲ್ಲೆ.
34.	ಯಾದಗಿರಿ	ಶಹಪುರ	29330703611	ಸರ್ಕಾರಿ ಪ್ರೌಢಶಾಲೆ, ದೋರನಹಳ್ಳಿ, ಶಹಪುರ ತಾಲ್ಲೂಕು. ಯಾದಗಿರಿ ಜಿಲ್ಲೆ.
35.	ಯಾದಗಿರಿ	ಗುರುಮಿಠಕಲ	29331005803	ಸರ್ಕಾರಿ ಪ್ರೌಢಶಾಲೆ, ಕಂದಕೂರು, ಗುರುಮಿಠಕಲ ತಾಲ್ಲೂಕು. ಯಾದಗಿರಿ ಜಿಲ್ಲೆ.
36.	ಬಳ್ಳಾರಿ	ಬಳ್ಳಾರಿ	29120905904	ಸರ್ಕಾರಿ ಪ್ರೌಢಶಾಲೆ, ಕೊರ್ಲಗುಂದಿ, ಬಳ್ಳಾರಿ ತಾಲ್ಲೂಕು. ಬಳ್ಳಾರಿ ಜಿಲ್ಲೆ.
37.	ಬಳ್ಳಾರಿ	ಸಂಡೂರು	29120707408	ಸರ್ಕಾರಿ ಪ್ರೌಢಶಾಲೆ, ಹೊಸದರೋಜಿ, ಸಂಡೂರು ತಾಲ್ಲೂಕು. ಬಳ್ಳಾರಿ ಜಿಲ್ಲೆ.
38.	ರಾಯಚೂರು	ರಾಯಚೂರು	29060703405	ಸರ್ಕಾರಿ ಪ್ರೌಢಶಾಲೆ, ಇಡಪನೂರು, ರಾಯಚೂರು ತಾಲ್ಲೂಕು. ರಾಯಚೂರು ಜಿಲ್ಲೆ.
39.	ರಾಯಚೂರು	ಸಿಂಧನೂರು	29060811704	ಸರ್ಕಾರಿ ಪ್ರೌಢಶಾಲೆ, ತಿಡಿಗೋಳ, ಸಿಂಧನೂರು ತಾಲ್ಲೂಕು. ರಾಯಚೂರು ಜಿಲ್ಲೆ.
40.	ಬೀದರ	ಹುಮನಾಬಾದ್	29050502826	ಸರ್ಕಾರಿ ಪ್ರೌಢಶಾಲೆ, ಹಳ್ಳಿಖೇಡ(ಬಿ), ಹುಮನಾಬಾದ್ ತಾಲ್ಲೂಕು. ಬೀದರ ಜಿಲ್ಲೆ.
41.	ಬೀದರ	ಚಿಟಗುಪ್ಪ	29050510101	ಸರ್ಕಾರಿ ಪ್ರೌಢಶಾಲೆ, ಮನ್ನಾಏಖ್ಖೆಳ್ಳಿ, ಚಿಟಗುಪ್ಪ ತಾಲ್ಲೂಕು. ಬೀದರ ಜಿಲ್ಲೆ.
42.	ಕೊಪ್ಪಳ	ಕೊಪ್ಪಳ	29070304902	ಸರ್ಕಾರಿ ಪ್ರೌಢಶಾಲೆ, ಗಿಣೀಗೇರಾ, ಕೊಪ್ಪಳ ತಾಲ್ಲೂಕು. ಕೊಪ್ಪಳ ಜಿಲ್ಲೆ.
43.	ಕೊಪ್ಪಳ	ಕುಷ್ಟಗಿ	29070409102	ಸರ್ಕಾರಿ ಪ್ರೌಢಶಾಲೆ, ಕೊರಡಕೇರಿ, ಕುಷ್ಟಗಿ ತಾಲ್ಲೂಕು, ಕೊಪ್ಪಳ ಜಿಲ್ಲೆ

44.	ರಾಯಚೂರು	ಮಸ್ಕಿ	29060800818	ಸರ್ಕಾರಿ ಪ್ರೌಢಶಾಲೆ, ಬಳಗಾನೂರು, ಮಸ್ಕಿ ತಾಲ್ಲೂಕು. ರಾಯಚೂರು ಜಿಲ್ಲೆ.
45.	ಕೊಪ್ಪಳ	ಕುಕನೂರು	29070911 702	ಸರ್ಕಾರಿ ಪ್ರೌಢಶಾಲೆ, ಶಿರೂರು, ಕುಕನೂರು ತಾಲ್ಲೂಕು, ಕೊಪ್ಪಳ ಜಿಲ್ಲೆ.
46.	ಕಲಬುರಗಿ	ಕಲಮಲಾಪುರ	29041105616	ಸರ್ಕಾರಿ ಪ್ರೌಢಶಾಲೆ, ಸೊಂತ, ಕಲಮಲಾಪುರ ತಾಲ್ಲೂಕು, ಕಲಬುರಗಿ ಜಿಲ್ಲೆ.
ಸಾಂಸ್ಥಿಕ ಸಾಮಾಜಿಕ ಹೊಣೆಗಾರಿಕೆ (ಸಿಎಸ್ ಆರ್) ಅನುದಾನದಿಂದ				
47.	ಬೆಂಗಳೂರು ಉತ್ತರ	ಬೆಂಗಳೂರು	29280700701	ಸ್ಟೋನ್‌ಹಿಲ್ ಸರ್ಕಾರಿ ಹಿರಿಯ ಪ್ರಾಥಮಿಕ ಹಾಗೂ ಪ್ರೌಢಶಾಲೆ, ತರಹುಣಸೆ, ಬೆಂಗಳೂರು ಉತ್ತರ ಜಿಲ್ಲೆ.
48.	ಬೆಂಗಳೂರು ಗ್ರಾಮಾಂತರ	ದೊಡ್ಡಬಳ್ಳಾಪುರ	29210215106	ಸರ್ಕಾರಿ ಪ್ರೌಢಶಾಲೆ, ಸರ್ಕಾರಿ ಪ್ರೌಢಶಾಲೆ ಬಾಶೆಟ್ಟಿಹಳ್ಳಿ, ದೊಡ್ಡಬಳ್ಳಾಪುರ ತಾಲ್ಲೂಕು, ಬೆಂಗಳೂರು ಗ್ರಾಮಾಂತರ ಜಿಲ್ಲೆ.
49.	ಬೆಂಗಳೂರು ದಕ್ಷಿಣ	ಚನ್ನಪಟ್ಟಣ	29320706807	ಶ್ರೀಮತಿ ಚನ್ನಮ್ಮ ಮಂಜೇಗೌಡ, ಕರ್ನಾಟಕ ಪಬ್ಲಿಕ್ ಸ್ಕೂಲ್ ಹೊಂಗನೂರು, ಚನ್ನಪಟ್ಟಣ ತಾಲ್ಲೂಕು, ರಾಮನಗರ, ಬೆಂಗಳೂರು ದಕ್ಷಿಣ ಜಿಲ್ಲೆ.
50.	ಬೆಂಗಳೂರು ಉತ್ತರ	ಯಲಹಂಕ	29280233502	ಕರ್ನಾಟಕ ಪಬ್ಲಿಕ್ ಸ್ಕೂಲ್ ಕೃಷ್ಣಾನಂದನಗರ, ಯಲಹಂಕ ತಾಲ್ಲೂಕು (N4), ಬೆಂಗಳೂರು ಉತ್ತರ ಜಿಲ್ಲೆ

13/3/26

(ಪದ್ಮಿನಿ ಎಸ್.ಎನ್.)
ಸರ್ಕಾರದ ಅಧೀನ ಕಾರ್ಯದರ್ಶಿ,
ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ,
(ಪದವಿ ಪೂರ್ವ ಶಿಕ್ಷಣ)